ಕೃತಿಗಳ ಆಳದಲ್ಲಿ ತುಂಬಾ ಅಸೂಕ್ಷ್ಮವಾದ ರಾಜಕೀಯ ಪ್ರಜ್ಞೆ ಇರುವುದುಂಟು. ಹೆಚ್ಚೇನೂ ಮಾತಾಡದೇ ಇರುವವರ ಕೃತಿಗಳ ಆಳದಲ್ಲಿ ಕ್ರಾಂತಿಕಾರಕ ರಾಜಕೀಯ ನಿಲುವುಗಳಿರಬಹುದು. ಇದನ್ನೆಲ್ಲ ಹಾಗೆ ಸಪಾಟಾಗಿ ನೋಡಲಾಗುವುದಿಲ್ಲ. ಫ್ಯಾಸಿಸ್ಟ್ ಧೋರಣೆಗಳನ್ನು ಹೊಂದಿದ್ದ ಟಿ.ಎಸ್. ಎಲಿಯೆಟ್, ರಿಲ್ಕೆ, ಎಜ್ರಾಪೌಂಡ್, ಡಬ್ಲ್ಯೂ.ಬಿ. ಏಟ್ಸ್ ಅವರೆಲ್ಲ ಉತ್ತಮ ಕಾವ್ಯ ಬರೆಯಲು ಸಾಧ್ಯವಾಗುತ್ತಿರಲಿಲ್ಲ. ಅಥವಾ ಮಾರ್ಕ್ಸಿಸ್ಟ್ ಕವಿಗಳಾಗಿದ್ದ ಬಹುತೇಕರು ಕಳಪೆ ಕವಿತೆಗಳನ್ನು ಬರೆಯಲು ಸಾಧ್ಯವಾಗುತ್ತಿರಲಿಲ್ಲ. ಲೇಖಕರ ಪತ್ರಿಕಾ ಹೇಳಿಕೆಗಳೆ ರಾಜಕೀಯ ನಿಲುವುಗಳಲ್ಲ. ಅವೆಲ್ಲ ಅವರ ಮೇಲುಮನಸ್ಸಿನ ಅಭಿಪ್ರಾಯಗಳು. ಇಂಥವುಗಳ ಬಗ್ಗೆ ನನಗೆ ಆಸಕ್ತಿಯಿಲ್ಲ. ನವ್ಯಸಾಹಿತ್ಯವನ್ನು ಅತ್ಯಂತ ಪ್ರಗತಿಪರ ಅಂತ ನಾವೆಲ್ಲ ಭಾವಿಸಿರಲಿಲ್ಲವೆ? ಆದರೆ, ಸ್ತ್ರೀವಾದ ನವ್ಯ ಸಾಹಿತ್ಯದಲ್ಲಿನ ಪುರುಷ ರಾಜಕಾರಣದ ಪ್ರಾಬಲ್ಯವನ್ನು ಸಮರ್ಥವಾಗಿ ಗುರುತಿಸಿದೆ. ಹಾಗಂತ ಅಡಿಗರ, ಲಂಕೇಶರ, ಗಂಗಾಧರ ಚಿತ್ತಾಲರ ಸಾಹಿತ್ಯಿಕ ಮಹತ್ವವೇನೂ ಕಡಿಮೆಯಾಗುವುದಿಲ್ಲ. ಅಥವಾ ಇನ್ನಾರೊ ಲೇಖಕರು ನಿರಂತರ ಪತ್ರಿಕಾ ಹೇಳಿಕೆ ಕೊಡುತ್ತಿದ್ದಾರೆಂದ ಮಾತ್ರಕ್ಕೆ ಅವರನ್ನು ಶ್ರೇಷ್ಠ ಲೇಖಕರೆಂದು ಮನ್ನಿಸಲಾಗುವುದಿಲ್ಲ. ನಮ್ಮಲ್ಲೇನಾಯಿತು ಅಂದ್ರೆ ಈ ಬಂಡಾಯ ಲೇಖಕರು ಸಾಹಿತ್ಯದ ರಾಜಕೀಯ ಸೂಕ್ಷ್ಮತೆಯನ್ನು ಪ್ರಸ್ತುತ ಶಕ್ತಿರಾಜಕಾರಣಕ್ಕೆ ಇಳಿಸುವ ಹುಂಬತನ ತೋರಿದರು. ನಾನು 'ಮಹಾಚೈತ್ರ' ಬರೆದಾಗ ಶಕ್ತಿರಾಜಕಾರಣ ವಿಚಲಿತಗೊಂಡಿತು. ಹೀಗೆಲ್ಲಾ ಆಗುತ್ತದೆಂಬ ಯಾವ ನಂಬಿಕೆಯೂ ನನಗಿರಲಿಲ್ಲ. ವಚನ ಚಳವಳಿಯ ಕಲ್ಪನೆಯನ್ನು ಹಿಗ್ಗಿಸುವುದು, ವಿಭಿನ್ನ ನೆಲೆಯಲ್ಲಿ ನೋಡಬೇಕೆಂಬ ಕಲಾವಿದನ ಉದ್ದೇಶಗಳಿದ್ದವೇ ಹೊರತು ಬೇರೆ ಉದ್ದೇಶಗಳು ಇರಲಿಲ್ಲ. ಅಂದರೆ ಕಲಾಕೃತಿಯ ಪ್ರತಿಭೆಯೊಳಗೆ ಅಡಗಿರುವ ರಾಜಕಾರಣವನ್ನು ಗುರುತಿಸಬೇಕೆ ಹೊರತು ಅದನ್ನು ಶಕ್ತಿರಾಜಕಾರಣ ಅಥವಾ ಪ್ರಸ್ತುತ ರಾಜಕೀಯದ ಆಶಯಗಳೊಂದಿಗೆ ನೇರಸಂಬಂಧ ಕಲ್ಪಿಸಲಾಗುವುದಿಲ್ಲ. ಹೀಗಾಗಿ ನಾನು ಕಳೆದ ಇಪ್ಪತ್ತು ವರ್ಷಗಳಿಂದ ಪತ್ರಿಕಾ ಹೇಳಿಕೆ ಕೊಡುವುದರ ಮೂಲಕ ನನ್ನ ರಾಜಕೀಯ ನಿಲುವುಗಳನ್ನು ಕಾಣಿಸಲೇಬೇಕೆಂಬ ಅಪಕ್ವ ನಿಲುವಿಗೆ ಬೀಳಲಿಲ್ಲ. ಅಥವಾ ಟಿವಿಯಲ್ಲಿ ನನ್ನ ಮುಖ ತೋರಲು ಹಾತೊರೆಯಲಿಲ್ಲ. ರಾಜಕೀಯ ನಿಲುವು ಏನು? ರಾಜಕೀಯ ನಿಲುವು ಯಾವುದು? ಅಂತ ಆತುರ ತೋರುವ ಕೆಲವರಿಗೆ ನನ್ನದೊಂದು ಪ್ರಶ್ನೆಯಿದೆ; ಯಾವುದೇ ರಾಜಕೀಯ ಉದ್ದೇಶ ಇಟ್ಟುಕೊಳ್ಳದೆ ಬರೆದ 'ಮಹಾಚೈತ್ರ' ನಾಟಕ ಉಂಟು ಮಾಡಿದ ತಲ್ಲಣವನ್ನು, ಮಹಾನ್ ರಾಜಕೀಯ ಉದ್ದೇಶ ಇಟ್ಟುಕೊಂಡು ಬರೆದ ಕೃತಿಗಳು ಯಾಕೆ ಮಾಡಲಿಲ್ಲ? ಸಾಹಿತ್ಯ ಕುರಿತ ಕೆಳಮಟ್ಟದ ಚಿಂತನೆಗಳಿಂದ ಪ್ರಭಾವಿತರಾದವರು ಮಾತ್ರ ಬೆಪ್ಪುಬೆಪ್ಪಾಗಿ, ಅವಸರ ಅವಸರವಾಗಿ ರಾಜಕೀಯ ನಿಲುವುಗಳನ್ನು ಗುರುತಿಸುತ್ತಾರೆ. ಕಲಾಕೃತಿಯೊಂದರ ಆಳದಲ್ಲಿ ಅಡಗಿರುವ ರಾಜಕೀಯ ವಿವೇಕವನ್ನು ಮರೆಯುತ್ತಾರೆ. ಇದಕ್ಕೆ ಇಷ್ಟು ಮಾತ್ರ ನಾನು ಹೇಳಬಲ್ಲೆ. ಮುಂದೆ ಲಂಬಿಸಲು ಇಷ್ಟಪಡುವುದಿಲ್ಲ.


## ವಿಕ್ರಂ ವಿಸಾಜಿ

ಕಲಬುರ್ಗಿಯಲ್ಲಿರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರು. ಮೂಲತಃ ಬೀದರ ಜಿಲ್ಲೆಯ ಭಾಲ್ಕಿಯವರಾದ ವಿಕ್ರಂ, ಕಲಬುರ್ಗಿಯ ಗುಲ್ಬರ್ಗ ವಿಶ್ವವಿದ್ಯಾಲಯದಿಂದ ಎಂ.ಎ. ಮತ್ತು ಪಿಎಚ್.ಡಿ. ಪದವಿಗಳನ್ನು ಪಡೆದಿದ್ದಾರೆ.

'ತಮಾಷಾ', 'ಗ್ರೀಕ್ ಹೊಸ ಕಾವ್ಯ', 'ರಕ್ತ ವಿಲಾಪ', 'ಬಿಸಿಲ ಕಾಡಿನ ಹಣ್ಣು', 'ರಸಗಂಗಾಧರ', 'ಮತ್ತೆ ಬಂತು ಶ್ರಾವಣ', 'ನಾದಗಳು ನುಡಿಯಾಗಲೇ', 'ಮಿರ್ಜಾ ಗಾಲಿಬ್ ಜೊತೆ ಒಂದು ಮಾತುಕತೆ' ಅವರ ಕೆಲವು ಪ್ರಕಟಿತ ಪುಸ್ತಕಗಳಾಗಿವೆ.